1. ಏಪ್ರಿಲ್ 93 - ಮೊದಲ ಅಂತಸ್ತಿನ ಕಾಂಕ್ರೀಟ್ ತಾರಸಿ (ಸ್ಲ್ಯಾಬ್)
2. ಮೇ ಮತ್ತು ಜೂನ್ 93 : ಒಪ್ಪ ಓರಣದೊಂದಿಗೆ ಕಟ್ಟಡದ ಉಳಿದ ಎಲ್ಲಾ ಕಾಮಗಾರಿಗಳನ್ನು ಪೂರ್ತಿಗೊಳಿಸಲಾಗುವುದು.

ಊ) ಜುಲೈ - ಆಗಸ್ಟ್ ತಿಂಗಳಲ್ಲಿ ನ್ಯಾಯಾಂಗ ಇಲಾಖೆಗೆ ಹಸ್ತಾಂತರಿಸಲು ಯೋಜಿಸಲಾಗಿದೆ.

ವಿಷಯ : ಹಿರೇಕೆರೂರಿನಲ್ಲಿ ಇನ್‌ಸ್ಪೆಕ್ಷನ್ ಬಂಗ್ಲೆ ಕಟ್ಟಡದ ಕಾರ್ಯದಲ್ಲಿ ವಿಳಂಬ

Q : 1450

ಶ್ರೀ ಬಿ. ಎಸ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1992-93ನೇ ಸಾಲಿನ ಆಯವ್ಯಯದಲ್ಲಿ ಹಿರೇಕೆರೂರು ಐ. ಬಿ. ಕಟ್ಟಡಕ್ಕೆ ಒದಗಿಸಿದ ಮೊತ್ತವೆಷ್ಟು ? ಹಾಗೂ ಅದರ ಅಂದಾಜಿನ ಮೊತ್ತವೆಷ್ಟು?

ಆ) ಈವರೆಗೆ ಸದರಿ ಕಟ್ಟಡಕ್ಕೆ ಆಗಿರುವ ವೆಚ್ಚವೆಷ್ಟು? ಮಾಡಿದ ಕಾಮಗಾರಿಯ ಪ್ರಗತಿ ಏನು?

ಇ) ಈ ಕೆಲಸ ಪ್ರಾರಂಭಿಸುವಲ್ಲಿ ಆದ ವಿಳಂಬಕ್ಕೆ ಕಾರಣವೇನು?

ಈ) ಈ ಕಾಮಗಾರಿಯನ್ನು ಪೂರ್ಣಗೊಳಿಸಲು ನಿರ್ದಿಷ್ಟ ಸಮಯವನ್ನು ನಿಗದಿಗೊಳಿಸಲಾಗಿದೆಯೇ? ಹಾಗಿದ್ದಲ್ಲಿ, ಸದರಿ ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿದ ನಿರ್ದಿಷ್ಟ ಅವಧಿ ಏನು?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಅಂದಾಜು ರೂ. 8.00 ಲಕ್ಷ
ಒದಗಿಸಿದ ಹಣ 2.50 ಲಕ್ಷ

ಆ) ಜನವರಿ ಅಂತ್ಯಕ್ಕೆ ಪಾಯ ಅಗೆತ ಪೂರ್ತಿಯಾಗಿದ್ದು : ಈವರೆವಿಗೂ 1000 ರೂ. ಗಳನ್ನು ಖರ್ಚು ಮಾಡಿದ್ದಾರೆ.

ಇ) ಸದರಿ ಕಾಮಗಾರಿಯ ಅಂದಾಜಿಗೆ ಜುಲೈ 92ರಲ್ಲಿ ಮಂಜೂರಾತಿ ದೊರೆತಿದೆ. 9 :92 ರಲ್ಲಿ ಕರೆಯಲಾದ ಮೊದಲ ಟೆಂಡರ್ ಪ್ರಕಟಣೆಗೆ ಒಬ್ಬರೇ ಗುತ್ತಿಗೆದಾರರು ಟೆಂಡರ್ ಸಲ್ಲಿಸಿದ್ದು ಅವರ ಕಾರ್ಯವೈಖರಿ , ಕಾಮಗಾರಿಯ ಪ್ರಗತಿ ತೃಪ್ತಿಕರವಾಗಿರದ ಕಾರಣ ಅದನ್ನು ತಿರಸ್ಕರಿಸಲಾಯಿತು. 12 : 92ರಲ್ಲಿ ಎರಡನೇ ಬಾರಿಗೆ ಕರೆಯಲಾದ ಟೆಂಡರ್ ಪ್ರಕಟಣೆಗೆ ಮತ್ತು 1 : 93 ರಲ್ಲಿ ಮೂರನ ಬಾರಿಗೆ ಕರೆಯಲಾದ ಟೆಂಡರ್ ಪ್ರಕಟನೆಗಳಿಗೆ ಯಾವುದೇ ಪ್ರತಿಕ್ರಿಯೆ ಇರದ ಕಾರಣ ಸದರಿ ಕಾಮಗಾರಿಯನ್ನು ಪ್ರಾರಂಭಿಸುವಲ್ಲಿ ವಿಳಂಬವಾಗಿರುವುದು.

ಈ) ನಿಗದಿಗೊಳಿಸಿಲ್ಲ.
ಕನಿಷ್ಟ ಪಕ್ಷ 12 ತಿಂಗಳಾದರೂ ಬೇಕು.

ವಿಷಯ : ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಪ್ರಸ್ತಾಪ

Q : 1541

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) : ಮಾನ್ಯ ಲೋಕೋಪಯೋಗಿ